ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 20-03-2023

**ಮುಖ್ಯವಿಚಾರಣೆ ಶ್ರೀ ಪಿ.ಎಚ್.ಆಡಿನ್ ವಕೀಲರಿಂದಃ ವಾದಿಯ ಪರವಾಗಿ**

ನಾನು ವಾದಿ ಇದ್ದು ನನ್ನ ಮುಖ್ಯ ಸಾಕ್ಷಿಗೆ ಅನುಗುಣವಾಗಿ ನ್ಯಾಯಾಲಯಕ್ಕೆ ಈಗ ನನ್ನ ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯವಿರುತ್ತವೆ.

12 ಪಹಣಿಗಳನ್ನು ನಿಪಿ-1 ರಿಂದ ನಿಪಿ-12 ಎಂದು ಗುರ್ತಿಸಲಾಗಿದೆ. ದಿನಾಂಕ 30-01-2020 ರಂದು ವಾದಿ ಪರ ವಕೀಲರು 6 ನೇ ಪ್ರತಿವಾದಿ ಯಲ್ಲಪ್ಪ ಇವರಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-13 ಎಂದು ಗುರ್ತಿಸಲಾಗಿದೆ. ಅಂಚೆ ರಶೀದಿಯನ್ನು ನಿಪಿ-14 ಎಂದು ಗುರ್ತಿಸಲಾಗಿದೆ. ಋಣಭಾರ ಪ್ರಮಾಣ ಪತ್ರವನ್ನು ನಿಪಿ-15 ಎಂದು ಗುರ್ತಿಸಲಾಗಿದೆ. ಆರ್.ಆರ್.ಟಿ. ಪ್ರಕರಣ ಸಂಬಂಧ ತಹಶೀಲ್ದಾರ ವಾದಿಗೆ ನೀಡಿದ ನೋಟಿಸಿನ ಪ್ರತಿಯನ್ನು ನಿಪಿ-16 ಎಂದು ಗುರ್ತಿಸಲಾಗಿದೆ. 02 ಪಂಚಾಯತ್ ಉತಾರಗಳನ್ನು ನಿಪಿ-17 ರಿಂದ ನಿಪಿ-18 ಎಂದು ಗುರ್ತಿಸಲಾಗಿದೆ. ಆದುದರಿಂದ ದಾವೆಯನ್ನು ಡಿಕ್ರಿ ಮಾಡಲು ಕೋರಿಕೆ. **ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಕುಷ್ಟಗಿ